# ನಿಲ್ದಾಣದಲ್ಲೊಂದು ಪುಸ್ತಕದ ಗೂಡು...

ನಾವು ಅಮೆರಿಕ ಇತರ ಪಾಶ್ಚಿಮಾತ್ಯ ದೇಶಗಳಲ್ಲಿ ಮಾತ್ರ ಬಸ್ ನಿಲ್ದಾಣ, ಏರ್‌ಪೋರ್ಟ್‌ನಲ್ಲಿ ಪುಸ್ತಕಗಳನ್ನು ಸಾರ್ವಜನಿಕರಿಗೆ ಓದಿಗಾಗಿ ಇಟ್ಟಿರುವ ಬಗ್ಗೆ ಗೊತ್ತಿದೆ. ಆದರೆ ವಿಜಯನಗರ ಜಿಲ್ಲೆ ಕೊಟ್ಟೂರು ತಾಲ್ಲೂಕಿನ ಹ್ಯಾಳ್ಯಾ ಎಂಬ ಸಣ್ಣ ಗ್ರಾಮದ ಬಸ್ ತಂಗುದಾಣದಲ್ಲಿ ಸಾವಿರಾರು ಪುಸ್ತಕಗಳನ್ನು ಇಟ್ಟಿರುವುದು ಎಲ್ಲರ ಗಮನಸೆಳೆಯುತ್ತಿದೆ. ಈ ಪುಸ್ತಕಗಳನ್ನು ಗ್ರಂಥಾಲಯ ಇಲಾಖೆಯ ಅರಿವು ಕೇಂದ್ರ ವತಿಯಿಂದ ಇಡಲಾಗಿದೆ. ಇದಕ್ಕೆ 'ಪುಸ್ತಕ ಗೂಡು' ಎಂದು ಕರೆಯಲಾಗುತ್ತಿದೆ.

ಇಲ್ಲಿನ ಗ್ರಾಮ ಪಂಚಾಯಿತಿ ವ್ಯಾಪ್ತಿಗೊಳಪಡುವ ಗ್ರಂಥಾಲಯ ಕಟ್ಟಡ ಬಸ್ ನಿಲ್ದಾಣದ ಪಕ್ಕದಲ್ಲಿಯೇ ಇದೆ. ಓದುಗರಿಗೆ ಅನುಕೂಲವಾಗುವಂತೆ ವಿವಿಧ ಪ್ರಕಾರದ 1000 ಪುಸ್ತಕಗಳನ್ನು ಇಲ್ಲಿ ಅಚ್ಚುಕಟ್ಟಾಗಿ ಹೊಂದಿಸಿ ಇಡಲಾಗಿದೆ. ನಿಲ್ದಾಣಕ್ಕೆ ಬರುವವರು ತಮಗಿಷ್ಟದ ಪುಸ್ತಕ ತೆರೆದು ಓದಬಹುದು. ಈ ಪುಸ್ತಕ ಗೂಡಿಗೆ ಸಾರ್ವಜನಿಕ ಗ್ರಂಥಾಲಯ ನಿರ್ದೇಶಕರು ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಭೇಟಿ ನೀಡಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಕೊಟ್ಟೂರು, ಕೂಡ್ಲಿಗಿ, ಹರಪನಹಳ್ಳಿ ಸುತ್ತಲಿನ ಗ್ರಾಮಸ್ಥರು, ಸ್ಥಳೀಯರು ಈ ಪುಸ್ತಕ ಗೂಡಿನ ಪ್ರಯೋಜನ ಪಡೆದಿದ್ದಾರೆ ಎನ್ನುತ್ತಾರೆ ಗ್ರಂಥಾಲಯ ಮೇಲ್ವಿಚಾರಕ ಲೋಕೇಶ ಅವರು.

–ಸಿ.ಕೆ. ಗಣಪ್ಪನವರ, ಮುಂಡರಗಿ




# ಚಲಾವಣೆ ನಿಲ್ಲಿಸಿದ ಚೂಳಿ ಮುಟ್ಟಿ

ಸೂಳಿ ಬುಟ್ಟಿ, ಸೂಳಿ ಮುಟ್ಟಿ, ಕಿಂಡಿ ಬುಟ್ಟಿ ಎಂದೆಲ್ಲಾ ಕರೆಯುವ ಚೂಳಿ ಮುಟ್ಟಿ ಅನ್ನದಾತರ ಕೃಷಿ ಚಟುವಟಿಕೆಯ ಅವಿಭಾಜ್ಯ ಅಂಗ. ಈಗ ಕೆಲವೇ ರೈತರಷ್ಟೇ ಇದನ್ನು ಬಳಸುತ್ತಿದ್ದಾರೆ. ನಾವು ಪ್ರಾಥಮಿಕ ಶಾಲೆಗೆ ಹೋಗುವ ಸಮಯದಲ್ಲಿ ಶಾಲೆಗೆ ಬಾರದ ಶಾಲೆ ಕಳ್ಳರನ್ನು ಚೂಳಿ ಮುಟ್ಟಿಯಲ್ಲಿ ತುಂಬಿ ಕರೆದುಕೊಂಡು ಹೋಗ್ತೇನೆ ಎಂದು ಅವರ ಮನೆಯ ಅಂಗಳಕ್ಕೆ ಇತರ ಮಕ್ಕಳ ಜೊತೆಗೆ ಹೋಗಿ ಮಕ್ಕಳನ್ನು ಶಿಕ್ಷಕರು ಶಾಲೆಗೆ ಕರೆತರುವುದು ಈಗಲೂ ನನ್ನ ಕಣ್ಣಮುಂದಿದೆ.

ಚೂಳಿ ಮುಟ್ಟಿ ಹಿಂದಿನ ಕಾಲದಲ್ಲಿ ರೈತರ ಬಹೂಪಯೋಗಿ ಸಲಕರಣೆ ಆಗಿತ್ತು. ಗೊಬ್ಬರ ಹೊರಲು, ತರಗೆಲೆ ತರಲು, ಅಡಿಕೆ ಕೊಂಡೊಯ್ಯಲು, ಮಾವಿನ ಕಾಯಿ ಮತ್ತು ಮಾವಿನ ಹಣ್ಣು ತುಂಬಲು, ಮಾವಿನ ಕಾಯಿಯನ್ನು ಹಣ್ಣಿಗೆ ಇಡಲು, ಉರುವಲು ತರಲು, ಗಾಣದಿಂದ ಕಬ್ಬಿನ ಸಿಪ್ಪೆ ತೆಗೆಯಲು, ತೆಂಗಿನ ಕಾಯಿ ತೋಟದಿಂದ ತರಲು ವಿವಿಧ ಅಳತೆಯ ಚೂಳಿ ಮುಟ್ಟಿಗಳು ಬಳಕೆಯಾಗುತ್ತಿದ್ದವು. ಅಮಾವಾಸ್ಯೆಯ ಆಜುಬಾಜಿನಲ್ಲಿ ಬೆಳೆದ ಬೆತ್ತವನ್ನು ಕಾಡಿನಿಂದ ಕಡಿದು ತಂದು ಅದನ್ನು ಸೀಳಿ ಬೆತ್ತದ ಬುಟ್ಟಿಯನ್ನು ನುರಿತ ಕುಶಲಕರ್ಮಿಗಳು ತಯಾರಿಸುತ್ತಿದ್ದರು.

–ಬೀರಣ್ಣ ನಾಯಕ, ಮೊಗಟಾ





# ಸಿಗ್ನೇಚರ್ ಸ್ಪೈಡರ್; ಕುತೂಹಲಕರ ರಚನೆ

ಜೇಡರ ಬಲೆಯ ರಚನೆಯು ಪ್ರಕೃತಿಯಲ್ಲೇ ಅತ್ಯಂತ ಸೂಕ್ಷ್ಮ, ವೈಜ್ಞಾನಿಕ ಚಾತುರ್ಯದಿಂದ ಕೂಡಿರುವಂತಹದ್ದು. ಹಲವು ವಿನ್ಯಾಸಗಳ ಬಲೆಗಳನ್ನು ನೇಯುವ ಜೇಡಗಳು ಪ್ರಕೃತಿಯಲ್ಲಿದ್ದು, ಅವುಗಳ ಪೈಕಿ 'ಸಿಗ್ನೇಚರ್ ಸ್ಪೈಡರ್' ನೇಯುವ ಬಲೆ ವಿಶಿಷ್ಟವಾದದ್ದು. ಬೆಳ್ಳಿ, ಹಳದಿ ಮತ್ತು ಕಪ್ಪು ಬಣ್ಣಗಳ ಹೊಳೆಯುವ ಪಟ್ಟೆಗಳನ್ನು ದೇಹದ ಮೇಲೆ ಹೊತ್ತಿರುವ ಈ ಜೇಡದ ಕಾಲುಗಳು ಉದ್ದವಿದ್ದು, ಕಪ್ಪು–ಬಿಳಿ ಚುಕ್ಕಿಗಳಿಂದ ಕೂಡಿವೆ. 'ಸಿಗ್ನೇಚರ್ ಸ್ಪೈಡರ್' ತನ್ನ ಬಲೆಯ ಮಧ್ಯ ಭಾಗದಲ್ಲಿ 'X' ಅಥವಾ 'Y' ಆಕಾರವನ್ನು ಹೋಲುವ ಸ್ಟೆಬಿಲಿಮೆಂಟಮ್ ಎನ್ನುವ ವಿಶೇಷ ವಿನ್ಯಾಸ ನಿರ್ಮಿಸುತ್ತದೆ. ಇದು ಬೆಳಕನ್ನು ಪ್ರತಿಫಲಿಸಿ ಕೀಟಗಳನ್ನು ಆಕರ್ಷಿಸುತ್ತದೆ.

ಹಗಲು ಹೊತ್ತಿನಲ್ಲಿ ಈ ಜೇಡವು ಜಾಲದ ಮಧ್ಯಭಾಗದಲ್ಲಿ ತಲೆಯನ್ನು ಕೆಳಗೆ ಹಾಕಿಕೊಂಡೇ ಬೇಟೆಗಾಗಿ ಕಾದಿರುತ್ತದೆ. ಜಾಲದ ಕೇಂದ್ರದಲ್ಲಿ ಒಂದು ಚಿಕ್ಕ ರಂಧ್ರ ಬಿಡಲಾಗಿದ್ದು, ತೊಂದರೆಗೊಳಗಾದಾಗ ಜೇಡವು ಅದರ ಮೂಲಕ ಸರಿದು ತಪ್ಪಿಸಿಕೊಳ್ಳುತ್ತದೆ. ಅಪಾಯಕಾರಿಯಲ್ಲದ ಈ ಜೇಡವು ಸೊಳ್ಳೆ, ಚಿಟ್ಟೆ, ಹುಳ ಮುಂತಾದ ಕೀಟಗಳನ್ನು ಬೇಟೆಯಾಡಿ ಪ್ರಕೃತಿಯ ಸಮತೋಲನ ಕಾಯುತ್ತದೆ. ವೈಜ್ಞಾನಿಕವಾಗಿ 'Argiope anasuja' ಎನ್ನುವ ಈ ಜೇಡ, ತೋಟಗಳು, ಕೃಷಿಭೂಮಿಗಳಲ್ಲಿ ದಕ್ಷಿಣ ಭಾರತ ಸೇರಿದಂತೆ ಏಷ್ಯಾದ ಹಲವೆಡೆ ವ್ಯಾಪಕವಾಗಿ ಕಂಡುಬರುತ್ತದೆ.

–ಜಿ. ಪದ್ಮಾ, ಸಂಡೂರು